# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | **1354** |
| **ಸದಸ್ಯರ ಹೆಸರು** | : | **ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು)** |
| **ಉತ್ತರಿಸುವ ದಿನಾಂಕ** | : | **19.03.2025** |
| **ಉತ್ತರಿಸುವ ಸಚಿವರು** | : | **ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪಶುಸಂಗೋಪನೆ ಇಲಾಖೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದವರಿಗಾಗಿ ಇರುವ ಯೋಜನೆಗಳು ಯಾವುವು;<br>(ಸಂಪೂರ್ಣ ಮಾಹಿತಿ ನೀಡುವುದು) | 2024-25ನೇ ಸಾಲಿನಲ್ಲಿ ಪಶುಸಂಗೋಪನೆ ಇಲಾಖೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗಾಗಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br>ಹಿಂದುಳಿದ ವರ್ಗದವರಿಗಾಗಿ ಇಲಾಖೆಯಲ್ಲಿ ಪ್ರತ್ಯೇಕವಾಗಿ ಯೋಜನೆಗಳು ಇರುವುದಿಲ್ಲ, ಆದರೆ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಸಾಮಾನ್ಯ ಯೋಜನೆಗಳಲ್ಲಿ ಹಿಂದುಳಿದ ವರ್ಗಗಳ ಫಲಾನುಭವಿಗಳು ಯೋಜನಾ ಸವಲತ್ತುಗಳನ್ನು ಪಡೆಯುತ್ತಿದ್ದಾರೆ. **ಅನುಬಂಧ-2** ರಲ್ಲಿ ನೀಡಲಾಗಿದೆ |
| ಆ) | ಪಶುಸಂಗೋಪನೆ ಇಲಾಖೆಯಲ್ಲಿ ಇರುವ ಸಾಲದ ಯೋಜನೆಗಳಾವುವು ಮತ್ತು ಫಲಾನುಭವಿಗಳಾಗಲು ಇರುವ ಮಾನದಂಡಗಳಾವುವು;<br>(ಮಾಹಿತಿ ನೀಡುವುದು) | ಪಶುಸಂಗೋಪನೆ ಇಲಾಖೆಯಲ್ಲಿ ಇರುವ ಸಾಲದ ಯೋಜನೆಗಳು ಮತ್ತು ಫಲಾನುಭವಿಗಳಾಗಲು ಇರುವ ಮಾನದಂಡಗಳ ಮಾಹಿತಿಯನ್ನು **ಅನುಬಂಧ-3**ರಲ್ಲಿ ನೀಡಲಾಗಿದೆ. |
| ಇ) | ಪಶುಪಾಲಕ ಸಮಾಜದವರಿಗಾಗಿ ಬೇಸಿಗೆಯಲ್ಲಿ ಉಂಟಾಗುವ ಮೇವಿನ ಕೊರತೆಯನ್ನು ನೀಗಿಸಲು ಸರ್ಕಾರ ತೆಗೆದುಕೊಳ್ಳುವ ಮುನ್ನೆಚ್ಚರಿಕೆ ಕ್ರಮಗಳಾವುವು?<br>(ಸಂಪೂರ್ಣವಾಗಿ ವಿವರ ನೀಡುವುದು) | ಪಶುಪಾಲಕ ಜಾನುವಾರುಗಳಿಗೆ ಬೇಸಿಗೆಯಲ್ಲಿ ಉಂಟಾಗುವ ಮೇವಿನ ಕೊರತೆಯನ್ನು ನೀಗಿಸಲು ಸರ್ಕಾರ ತೆಗೆದುಕೊಳ್ಳುವ ಮುನ್ನೆಚ್ಚರಿಕೆ ಕ್ರಮಗಳ ವಿವರ ಈ ಕೆಳಕಂಡಂತಿದೆ:<br><br>ಸಾಪ್ತಾಹಿಕ ಮೇವಿನ ವರದಿಯನ್ವಯ ಯಾವುದೇ ತಾಲ್ಲೂಕಿನಲ್ಲಿ ಮೇವಿನ ಲಭ್ಯತೆಯು 4 ವಾರಗಳಿಗಿಂತ ಕಡಿಮೆ ಆದಲ್ಲಿ ಮೇವಿನ ಬ್ಯಾಂಕ್‌ನ್ನು ತೆರೆದು ರೈತರಿಗೆ ರಿಯಾಯಿತಿ ದರದಲ್ಲಿ ಒಣ ಮೇವನ್ನು ಪೂರೈಸಲು ಕ್ರಮವಹಿಸಲಾಗುವುದು.<br><br>ಸಾಪ್ತಾಹಿಕ ಮೇವಿನ ವರದಿಯನ್ವಯ ಯಾವುದೇ ತಾಲ್ಲೂಕಿನಲ್ಲಿ ಮೇವಿನ ಲಭ್ಯತೆಯು 2 ವಾರಗಳಿಗಿಂತ ಕಡಿಮೆ ಆದಲ್ಲಿ ಹೋಬಳಿ ಮಟ್ಟದಲ್ಲಿ ಜಾನುವಾರು ಶಿಬಿರವನ್ನು ತೆರೆದು ಜಾನುವಾರುಗಳಿಗೆ ಮೇವು, ನೀರು, ನೆರಳನ್ನು ಒದಗಿಸಿ ಸಂರಕ್ಷಿಸಲಾಗುವುದು. |

| | | |
|---|---|---|
| | | ಜಾನುವಾರುಗಳಿಗೆ ಮೇವಿನ ಸಮಸ್ಯೆ ಉಂಟಾಗದಂತೆ ಮುಂಜಾಗ್ರತೆಯಾಗಿ ಮೇವು ಉತ್ಪಾದನೆಯನ್ನು ಹೆಚ್ಚಿಸಲು ನೀರಾವರಿ ಸೌಲಭ್ಯವಿರುವ ರೈತರಿಗೆ ಕಡಿಮೆ ಅವಧಿಯಲ್ಲಿ ಮೇವು ಉತ್ಪಾದಿಸುವ ಮೇವಿನ ಬೀಜದ 4,52,463 ಮಿನಿಕಿಟ್‌ಗಳನ್ನು ನೀಡಲಾಗಿದೆ.<br><br>ಇಲಾಖೆಯ ಕ್ಷೇತ್ರಗಳಲ್ಲಿ ಮೇವಿನ ಬೇರುಗಳನ್ನು ಉತ್ಪಾದಿಸಿ ಆಸಕ್ತ ರೈತರಿಗೆ ವಿತರಿಸಲಾಗುವುದು.<br><br>ಕಡಿಮೆ ದರ್ಜೆಯ ಮೇವಿಗೆ ಯೂರಿಯ ದ್ರಾವಣವನ್ನು ಸಿಂಪಡಿಸಿ ಒಣ ಮೇವು ಪೌಷ್ಠೀಕರಣಗೊಳಿಸುವ ಕುರಿತು ಹಾಗೂ ಹಸಿರು ಮೇವಿನಿಂದ ರಸಮೇವು ತಯಾರಿಸಿ, ಸಂರಕ್ಷಿಸಿ, ಬೇಸಿಗೆಯಲ್ಲಿ ಬಳಸಲು ರೈತರಿಗೆ ತರಬೇತಿ ಮತ್ತು ಪ್ರಾತ್ಯಕ್ಷಿಕೆ ನೀಡಲಾಗುತ್ತಿದೆ.<br><br>ರೈತರು ಬೆಳೆಯುವ ಮೇವು ಪೋಲಾಗದಂತೆ ಸದ್ಬಳಕೆ ಮಾಡಿಕೊಳ್ಳಲು ರೈತರಿಗೆ ಪ್ರಸಕ್ತ ಸಾಲಿನಲ್ಲಿ ಒಟ್ಟಾರೆಯಾಗಿ 1,428 ಮೇವು ಕತ್ತರಿಸುವ ಯಂತ್ರವನ್ನು ವಿತರಿಸಲಾಗಿದೆ.<br><br>ತೋಟಗಾರಿಕೆ ಬೆಳೆಗಳ ಮಧ್ಯ ಖಾಲಿ ಇರುವ ಪ್ರದೇಶಗಳಲ್ಲಿ ಮೇವು ಬೆಳೆಯುವ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳಲು ರೈತರಿಗೆ ಸೂಕ್ತ ಮಾರ್ಗದರ್ಶನ ನೀಡಲಾಗುತ್ತಿದೆ. |

**ಪಸಂಮೀ 100 ಸಲೆವಿ 2025**

(ಸಹಿ)
**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

## ಅನುಬಂಧ-1

**2024-25 ನೇ ಸಾಲಿನಲ್ಲಿ ಪಶುಸಂಗೋಪನೆ ಇಲಾಖೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗಾಗಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.**

- **ಹಾಲು ಉತ್ಪಾದಕರಿಗೆ ಉತ್ತೇಜನ**: ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಹಾಲು ಸರಬರಾಜು ಮಾಡುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಸದಸ್ಯರಿಗೆ ಪ್ರತಿ ಲೀಟರ್ ಗುಣಾತ್ಮಕ ಹಾಲಿಗೆ ರೂ. 5/- ರಂತೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ.

- **ಅನುಸೂಚಿತ ಜಾತಿ ಉಪ ಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013 ರ ರಡಿ ಬಳಕೆಯಾಗದೇ ಇರುವ ಮೊತ್ತ**

  ಅ) ಪರಿಶಿಷ್ಟ ಜಾತಿ ಉಪಯೋಜನೆಯಡಿಯಲ್ಲಿ ತಲಾ 5 ವಾರದ 20 ಕೋಳಿ ಮರಿಗಳನ್ನು ಉತ್ಪಾದಿಸಿ ಗ್ರಾಮೀಣ ಭಾಗದ ಪರಿಶಿಷ್ಟ ಜಾತಿಯ ರೈತ ಮಹಿಳೆಯರಿಗೆ ಉಚಿತವಾಗಿ ವಿತರಿಸಲಾಗುತ್ತಿದೆ.

  ಆ)

  - ಗಿರಿಜನ ಉಪಯೋಜನೆಯಡಿಯಲ್ಲಿ ಕೋಳಿ ಮರಿಗಳನ್ನು ಉತ್ಪಾದಿಸಿ ಗ್ರಾಮೀಣ ಭಾಗದ ಪರಿಶಿಷ್ಟ ಜಾತಿಯ ರೈತ ಮಹಿಳೆಯರಿಗೆ ವಿತರಿಸಲಾಗುತ್ತಿದೆ.
  - ಪರಿಶಿಷ್ಟ ಪಂಗಡದ ರೈತರಿಗೆ 10+1 ಕುರಿ/ ಮೇಕೆ ಘಟಕ (ಶೇ 90 ರೂ. 59400.00/- ಸಹಾಯಧನದೊಂದಿಗೆ) ವಿತರಿಸಲಾಗುತ್ತಿದೆ.

- **ಜಾನುವಾರು ವಿಮಾ ಯೋಜನೆ:** ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆಯಡಿ ಜಾನುವಾರುಗಳನ್ನು ವಿಮೆಗೆ ಒಳಪಡಿಸಲಾಗುತ್ತಿದೆ.

  ವಿಮಾ ಸೌಲಭ್ಯವನ್ನು ಪ್ರತಿ ಫಲಾನುಭವಿಗೆ ಗರಿಷ್ಟ 10 ಹಾಲು ಹಿಂಡುವ ರಾಸುಗಳು /ದೇಶಿ ತಳಿ ರಾಸುಗಳು /ಎಮ್ಮೆ /ಕುದುರೆ /ಕತ್ತೆ /ಮಣಕ /ಹೋರಿ ಹಾಗೂ 50 ಕುರಿ /ಮೇಕೆ /ಮೊಲ /ಹಂದಿಗಳಿಗೆ ಮಿತಿಗೊಳಿಸಲಾಗಿದೆ ರೈತರು ಸಂದಾಯ ಮಾಡುವ ಪ್ರತಿಯೊಂದು ಜಾನುವಾರು ಪ್ರೀಮಿಯಂ ಮೇಲೆ ಶೇ. 85 ರಷ್ಟು ಸಾಹಾಯಧನದೊಂದಿಗೆ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ.

- **ಪಶುವೈದ್ಯಕೀಯ ಮತ್ತು ಪ್ರಾಣಿ ವಿಜ್ಞಾನಗಳ ವಿಶ್ವವಿದ್ಯಾನಿಲಯ ಸ್ಥಾಪನೆ:** ಪಶುವೈದ್ಯಕೀಯ ಮತ್ತು ಪ್ರಾಣಿ ವಿಜ್ಞಾನಗಳ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಬೋಜನ ವೆಚ್ಚ (EBL) ಮತ್ತು ಇತ್ಯಾದಿ ವೆಚ್ಚಗಳನ್ನು ಭರಿಸಲಾಗುತ್ತಿದೆ.

## ಅನುಬಂಧ-2

**2024-25 ನೇ ಸಾಲಿನಲ್ಲಿ ಪಶುಸಂಗೋಪನೆ ಇಲಾಖೆಯಲ್ಲಿ ಸಾಮಾನ್ಯ, ಹಿಂದುಳಿದ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದವರಿಗೆ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.**

- **ಹಾಲು ಉತ್ಪಾದಕರಿಗೆ ಉತ್ತೇಜನ**: ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಹಾಲು ಸರಬರಾಜು ಮಾಡುವ ಸದಸ್ಯರಿಗೆ ಪ್ರತಿ ಲೀಟರ್ ಗುಣಾತ್ಮಕ ಹಾಲಿಗೆ ರೂ. 5/- ರಂತೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ.

- **ಮಹಿಳೆಯರಿಗೆ ಶೇ.6 ರ ಬಡ್ಡಿ ಸಹಾಯಧನ:** ರೈತ ಮಹಿಳೆಯರಲ್ಲಿ ಹೈನುಗಾರಿಕೆ ಯನ್ನು ಪ್ರೋತ್ಸಾಹಿಸಲು ಹಸು/ಎಮ್ಮೆ ಖರೀದಿಗೆ ಸಾಲವನ್ನು ಸಕಾಲದಲ್ಲಿ ಮರು ಪಾವತಿ ಮಾಡುವ ಮಹಿಳೆಯರಿಗೆ ರಾಜ್ಯ ಸರ್ಕಾರದಿಂದಲೇ ಶೇ.6 ರ ಬಡ್ಡಿ ಸಹಾಯಧನ ನೀಡಲಾಗುವುದು.

- **ನಾಟಿ ಕೋಳಿ ವಿತರಣೆ:** ಹಿತ್ತಲ ಕೋಳಿ ಸಾಕಾಣಿಕೆ ಪ್ರೋತ್ಸಾಹಿಸಲು ತಲಾ 5 ವಾರದ 20 ಕೋಳಿ ಮರಿಗಳನ್ನು ರೈತ ಮಹಿಳಾ ಫಲಾನುಭವಿಗಳಿಗೆ ವಿತರಿಸಲಾಗುತ್ತಿದೆ.

- **ರಾಸುಗಳ ಆಕಸ್ಮಿಕ ಸಾವಿಗೆ ಆಪತ್ತು ನಿಧಿ:** ರಾಸುಗಳು ಆಕಸ್ಮಿಕ ಮರಣ ಹೊಂದಿದಾಗ ರೈತರಿಗೆ ಉಂಟಾಗುವ ಆರ್ಥಿಕ ನಷ್ಟವನ್ನು ಭರಿಸಲು ಮರಣ ಹೊಂದಿದ ದನ, ಎಮ್ಮೆ, ಎತ್ತು, ಹೋರಿ ಮತ್ತು ಕಡಸುಗಳಿಗೆ ರೂ.10000/- ಪರಿಹಾರಧನವನ್ನು ರಾಸುಗಳ ಮಾಲೀಕರಿಗೆ ವಿತರಿಸಲಾಗುವುದು.

- **ಸಣ್ಣ ಪ್ರಾಣಿಗಳ ಆಕಸ್ಮಿಕ ಸಾವಿಗೆ ಆಪತ್ತು ನಿಧಿ:** ಆಕಸ್ಮಿಕ ಮರಣ ಹೊಂದಿದ 3-6 ತಿಂಗಳ ವಯಸ್ಸಿನ ಕುರಿ/ಮೇಕೆಗಳಿಗೆ 3,500 ರೂ. ಹಾಗೂ 6 ತಿಂಗಳ ಮೇಲ್ಪಟ್ಟ ಕುರಿ/ಮೇಕೆಗಳಿಗೆ ಅವುಗಳ ಮಾಲೀಕರಿಗೆ ರೂ.5000/- ಪರಿಹಾರಧನ ವಿತರಣೆ ಮಾಡಲಾಗುವುದು.

- **ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆ:** 20+1 ಕುರಿ/ಮೇಕೆ ಘಟಕಗಳನ್ನು ರಾಜ್ಯದಲ್ಲಿನ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಲ್ಲಿನ ಅರ್ಹ ಕುರಿಗಾಹಿ ಸದಸ್ಯರುಗಳಿಗೆ ನೀಡಲಾಗುವುದು ಘಟಕದ ವೆಚ್ಚ ರೂ.1,75,000/-( ರೂ.87500 (ಶೇ.50 ರಷ್ಟು) ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ (NCDC), ಸಹಕಾರ ಇಲಾಖೆ, ಭಾರತ ಸರ್ಕಾರದ ವತಿಯಿಂದ ಸಾಲ, ರೂ.43750 (ಶೇ.25 ರಷ್ಟು) ಕರ್ನಾಟಕ ಸರ್ಕಾರದ ಸಹಾಯಧನ ರೂ.43750 (ಶೇ.25) ಯಷ್ಟು ಫಲಾನುಭವಿಗಳವಂತಿಗೆ/ ಬ್ಯಾಂಕ್ ಸಾಲ)

- **ಲಸಿಕಾ ಕಾರ್ಯಕ್ರಮ:** ಕಾಲುಬಾಯಿಜ್ವರ, ಪಿ.ಪಿ.ಆರ್ ಮತ್ತು ಕಂದುರೋಗಗಳ ವಿರುದ್ಧ ಲಸಿಕಾ ಕಾರ್ಯಕ್ರಮಕ್ಕೆ ಶೇ. 100 ಕೇಂದ್ರದ ಅನುದಾನ ಮತ್ತು ಜಾನುವಾರು ರೋಗನಿಯಂತ್ರಣ ಯೋಜನೆಯಡಿಯಲ್ಲಿ (ಆಸ್ಕಾಡ್) ಗಳಲೇರೋಗ, ಕರುಳುಬೇನೆ, ಚರ್ಮಗಂಟು ಮತ್ತು ರೇಬೀಸ್ ವಿರುದ್ಧ ಲಸಿಕೆ ಹಾಕಲಾಗುವುದು.

- **ಜಾನುವಾರು ವಿಮಾ ಯೋಜನೆ:** ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆಯಡಿ ಜಾನುವಾರುಗಳನ್ನು ವಿಮೆಗೆ ಒಳಪಡಿಸಲಾಗುತ್ತಿದೆ.

ವಿಮಾ ಸೌಲಭ್ಯವನ್ನು ಪ್ರತಿ ಫಲಾನುಭವಿಗೆ ಗರಿಷ್ಠ 10 ಹಾಲು ಹಿಂಡುವ ರಾಸುಗಳು /ದೇಶಿ ತಳಿ ರಾಸುಗಳು /ಎಮ್ಮೆ /ಕುದುರೆ /ಕತ್ತೆ /ಮಣಕ /ಹೋರಿ ಹಾಗೂ 50 ಕುರಿ /ಮೇಕೆ /ಮೊಲ /ಹಂದಿಗಳಿಗೆ ಮಿತಿಗೊಳಿಸಲಾಗಿದೆ ರೈತರು ಸಂದಾಯ ಮಾಡುವ ಪ್ರತಿಯೊಂದು ಜಾನುವಾರು ಪ್ರೀಮಿಯಂ ಮೇಲೆ ಶೇ. 85 ರಷ್ಟು ಸಾಹಾಯಧನದೊಂದಿಗೆ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ.

ಪ್ರೀಮಿಯಂ ದರ ಒಂದು ವರ್ಷಕ್ಕೆ ವಿಮಾ ಮೊತ್ತಕ್ಕೆ ಶೇ 3.78, ಎರಡು ವರ್ಷಕ್ಕೆ ವಿಮಾ ಮೊತ್ತಕ್ಕೆ ಶೇ.7.56 ಮತ್ತು ಮೂರು ವರ್ಷಕ್ಕೆ ವಿಮಾ ಮೊತ್ತಕೆ ಶೇ 11.00.

> **ಕೃತಕ ಗರ್ಭಧಾರಣೆ:**

ರಾಜ್ಯದಲ್ಲಿ ಕೃತಕ ಗರ್ಭಧಾರಣಾ ಕಾರ್ಯಕ್ರಮವು ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು ರಾಜ್ಯ ಸರ್ಕಾರದ ಅನುದಾನದಲ್ಲಿ 4272 ಪಶುವೈದ್ಯ ಸಂಸ್ಥೆಗಳಲ್ಲಿ ಪ್ರತಿ ನಿತ್ಯ ಕೃತಕಗರ್ಭಧಾರಣೆ ಕೈಗೊಳ್ಳಲಾಗುತ್ತಿದೆ.

> **275 ಸುಸಜ್ಜಿತ ಸಂಚಾರಿ ಪಶು ಚಿಕಿತ್ಸಾ ವಾಹನಗಳಲ್ಲಿ** ರೈತರ ಮನೆ ಬಾಗಿಲಿಗೆ ತುರ್ತು ಪಶು ವೈದ್ಯಕೀಯ ಸೇವೆಯನ್ನು ಒದಗಿಸಲಾಗುತ್ತಿದೆ. ಜಾನುವಾರು ಚಿಕಿತ್ಸೆ ಅಗತ್ಯವಿರುವ ಜಾನುವಾರು ಮಾಲೀಕರು ಸಹಾಯವಾಣಿ ಸಂ. 1962 ಗೆ ಕರೆ ಮಾಡಿ ಅಗತ್ಯ ತುರ್ತು ಸೇವೆಗಳನ್ನು ಪಡೆಯುತ್ತಿದ್ದಾರೆ.

> **ವಿಸ್ತರಣಾ ಘಟಕಗಳ ಬಲಪಡಿಸುವಿಕೆಯಡಿ** ಮಿಶ್ರತಳಿ ಕರುಗಳ / ಜಾನುವಾರು ಪ್ರದರ್ಶನ, ಹಾಲು ಕರೆಯುವ ಸ್ಪರ್ಧೆ, ಪ್ರಾಣಿ ಜನ್ಯ ರೋಗಗಳ ಜಾಗೃತಿ ಶಿಬಿರ ರೈತರ ತರಬೇತಿ ಮತ್ತು ಪ್ರವಾಸ, ಜಿಲ್ಲಾ ಮಟ್ಟದ ಪಶುಮೇಳ ಮತ್ತು ಜಾನುವಾರು ಜಾತ್ರೆ ಏರ್ಪಡಿಸಲಾಗುತ್ತಿದೆ.

> **ಮೇವಿನ ಕಿರು ಪೊಟ್ಟಣಗಳ ವಿತರಣೆ:** ರೈತರಿಗೆ ಉಚಿತವಾಗಿ ಮೇವಿನ ಕಿರು ಪೊಟ್ಟಣಗಳ ವಿತರಿಸಲಾಗುತ್ತಿದೆ.

## <u>ಅನುಬಂಧ-3</u>

**2024-25 ನೇ ಸಾಲಿನಲ್ಲಿ ಪಶುಪಾಲನಾ ಇಲಾಖೆಯಲ್ಲಿ ಇರುವ ಸಾಲದ ಯೋಜನೆಗಳು ಮತ್ತು ಫಲಾನುಭವಿಗಳಾಗಲು ಇರುವ ಮಾನದಂಡಗಳ ವಿವರ ಈ ಕೆಳಕಂಡಂತಿವೆ.**

1. **ಮಹಿಳೆಯರಿಗೆ ಶೇ.6 ರ ಬಡ್ಡಿ ಸಹಾಯಧನ:** ರೈತ ಮಹಿಳೆಯರಲ್ಲಿ ಹೈನುಗಾರಿಕೆ ಯನ್ನು ಪ್ರೋತ್ಸಾಹಿಸಲು ಹಸು/ಎಮ್ಮೆ ಖರೀದಿಗೆ ಸಾಲವನ್ನು ಸಕಾಲದಲ್ಲಿ ಮರು ಪಾವತಿ ಮಾಡುವ ಮಹಿಳೆಯರಿಗೆ ರಾಜ್ಯ ಸರ್ಕಾರದಿಂದ ಶೇ.6 ರ ಬಡ್ಡಿ ಸಹಾಯಧನ ನೀಡಲಾಗುತ್ತಿದೆ.

**<u>ಮಾನದಂಡಗಳು</u>**

- ಸದರಿ ಕಾರ್ಯಕ್ರಮವು ಮಹಿಳೆಯರಿಗೆ ಮಾತ್ರ ರೂಪಿಸಲಾದ ಕಾರ್ಯಕ್ರಮವಾಗಿದೆ.
- 2024-25 ನೇ ಸಾಲಿನಲ್ಲಿ ವಾಣಿಜ್ಯ ಬ್ಯಾಂಕ್ ಗಳು ಹೈನುಗಾರಿಕೆಗಾಗಿ ಮಹಿಳೆಯರಿಗೆ ನೀಡಲಾಗುವ ಸಾಲದ ಮೇಲಿನ ಬಡ್ಡಿ ದರಕ್ಕೆ ಸಕಾಲದಲ್ಲಿ ಮರುಪಾವತಿ ಮಾಡುವ ಪ್ರತಿಯೊಬ್ಬ ಮಹಿಳೆಗೆ ಒಂದು ಜಾನುವಾರುವಿಗೆ (ಹಸು/ಎಮ್ಮೆ) ಗರಿಷ್ಠ ರೂ:65000/-ಗಳ ಸಾಲದ ಮೊತ್ತಕ್ಕೆ ಶೇ.6 ಬಡ್ಡಿ ಸಹಾಯಧನವನ್ನು ಪ್ರತಿ ತ್ರೈಮಾಸಿಕ ಅವಧಿಗೆ ರಾಜ್ಯ ಸರ್ಕಾರದಿಂದ ನೀಡಲಾಗುತ್ತಿದೆ.
- ಪ್ರಸಕ್ತ ಸಾಲಿನಲ್ಲಿ ಸಾಲ ಪಡೆಯುವ ವೈಯಕ್ತಿಕ ಮಹಿಳಾ ಫಲಾನುಭವಿಗೆ ಮಾತ್ರ ಶೇ.6 ರ ಬಡ್ಡಿ ಸಹಾಯಧನ ನೀಡಲಾಗುವುದು.
- ಸದರಿ ಯೋಜನೆಯು ಯಾವುದೇ ಉದ್ಯಮಿ/ವ್ಯವಹಾರ ಸಂಸ್ಥೆಗಳಿಗೆ ಮತ್ತು ಈಗಾಗಲೇ ಬೇರೆ ಯೋಜನೆಗಳಡಿ ಸಹಾಯಧನ ಪಡೆದಿರುವ ರೈತ ಮಹಿಳೆಯರಿಗೆ ಅನ್ವಯಿಸುವುದಿಲ್ಲ.
- ಫಲಾನುಭವಿಗೆ ಸಂಬಂಧಿಸಿದ ದಾಖಲಾತಿಗಳ ನಿರ್ವಹಣೆ ಹಾಗೂ ಯೋಜನೆ ಅನುಸರಣೆ ಕಾರ್ಯಗಳನ್ನು ಸ್ಥಳೀಯ ಪಶುವೈದ್ಯಾಧಿಕಾರಿಗಳು ನಿರ್ವಹಿಸುವುದು.

2. **ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆ:** 20+1 ಕುರಿ/ಮೇಕೆ ಘಟಕಗಳನ್ನು ರಾಜ್ಯದಲ್ಲಿನ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಲ್ಲಿನ ಅರ್ಹ ಕುರಿಗಾಹಿ ಸದಸ್ಯರುಗಳಿಗೆ ನೀಡಲಾಗುವುದು ಘಟಕದ ವೆಚ್ಚ ರೂ.1,75,000/-( ರೂ.87500 (ಶೇ.50 ರಷ್ಟು) ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ (NCDC), ಸಹಕಾರ ಇಲಾಖೆ, ಭಾರತ ಸರ್ಕಾರದ ವತಿಯಿಂದ ಸಾಲ, ರೂ.43750 (ಶೇ.25 ರಷ್ಟು) ಕರ್ನಾಟಕ ಸರ್ಕಾರದ ಸಹಾಯಧನ ರೂ.43750 (ಶೇ.25) ರಷ್ಟು ಫಲಾನುಭವಿಗಳವಂತಿಗೆ/ ಬ್ಯಾಂಕ್ ಸಾಲ)

**<u>ಮಾನದಂಡಗಳು</u>**

**<u>ಅರ್ಹ ಫಲಾನುಭವಿಗಳು:</u>**

- ಸಂಘವು ಸಹಕಾರ ಸಂಘಗಳ ಕಾಯ್ದೆ 1959 ರ ಅನುಗುಣವಾಗಿ ಕರ್ನಾಟಕ ಸರ್ಕಾರದ ಸಹಕಾರ ಇಲಾಖೆಯಲ್ಲಿ ನೋಂದಣಿ ಯಾಗಿರಬೇಕು.
- ಸಂಘವು, ತನ್ನ ಸಭೆಗಳನ್ನು ನಿರಂತರವಾಗಿ ನಡೆಸಿರಬೇಕು ಹಾಗೂ ವಾರ್ಷಿಕ ಸಾಮಾನ್ಯ ಸಭೆ (AGM) ಹಾಗೂ ಚುನಾವಣಾ ಬೈಲಾ ಹಾಗೂ ಕಾಯ್ದೆಗನುಗುಣವಾಗಿ ನಡೆಸಿರತಕ್ಕದ್ದು.
- ಸಂಘದ ಇತ್ತೀಚಿನ ಮೂರು ವರ್ಷಗಳ ಲೆಕ್ಕ ಪರಿಶೋಧನೆ ಆಗಿರಬೇಕು ಹಾಗೂ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಸಹಕಾರ ಇಲಾಖೆ ದೃಢೀಕರಣ ಹೊಂದಿರಬೇಕು.
- ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದೊಂದಿಗೆ ಸಂಯೋಜನೆಗೊಂಡಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಲ್ಲಿನ ಅರ್ಹ ಕುರಿಗಾಹಿ ಸದಸ್ಯರಿಗೆ ಮಾತ್ರ.
- ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆಗಳ ಸಾಕಾಣಿಕೆದಾರರ ಸಂಘಗಳ ಮಹಾ ಮಂಡಳಗಳ ಜೊತೆಗೆ ಷೇರುದಾರರಾಗಿ ನೋಂದಣಿಯಾಗಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಲ್ಲಿನ ಅರ್ಹ ಕುರಿಗಾಹಿ ಸದಸ್ಯರಿಗೆ ಮಾತ್ರ.

- ಸಂಘವು ತನ್ನ ಎಲ್ಲಾ ಸದಸ್ಯರ ಹಾಗೂ ಅವರು ಹೊಂದಿರುವ ಕುರಿ / ಮೇಕೆಗಳ ಕುರಿತಂತೆ ಎಲ್ಲಾ ವಿವರಗಳನ್ನು ಇಲಾಖೆಯು ಒದಗಿಸುವ ನಿಗದಿತ ನಮೂನೆಯಲ್ಲಿ ನೀಡತಕ್ಕದ್ದು.
- ಸದರಿ ಕಾರ್ಯಕ್ರಮದಲ್ಲಿ ಸರ್ಕಾರದ ನಿಯಮಗಳಂತೆ ಮಹಿಳೆಯರಿಗೆ (ಶೇ.33.3), ವಿಶೇಷ ಚೇತನರಿಗೆ (ಶೇ.3) ಆದ್ಯತೆ ನೀಡಲಾಗುವುದು.
- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಫಲಾನುಭವಿಗಳು ಜಾತಿ ಪ್ರಮಾಣ ಪತ್ರವನ್ನು ಹೊಂದಿರಬೇಕು (ಪ್ರಮಾಣ ಪತ್ರದಲ್ಲಿ ಆರ್ ಡಿ ನಂ: ಇರಬೇಕು)
- ಅರ್ಜಿದಾರರು ಕಡ್ಡಾಯವಾಗಿ FRUITS ತಂತ್ರಾಂಶದಲ್ಲಿ ನೋಂದಾಯಿಸಿರಬೇಕು.
- ಕುರಿ, ಮೇಕೆಗಳ ಮಾರಾಟ ವ್ಯವಸ್ಥೆ ಕಲ್ಪಿಸುವ NeML Marketing Platform (Online) ನಲ್ಲಿ ನೋಂದಣಿಯಾಗಿರಬೇಕು.
- ಒಂದು ಕುಟುಂಬಕ್ಕೆ ಒಂದೇ ಅರ್ಜಿಯನ್ನು ಸಲ್ಲಿಸತಕ್ಕದ್ದು, ಒಂದಕ್ಕಿಂತ ಹೆಚ್ಚಿನ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ ಅಂತಹ ಕುಟುಂಬದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**<u>ಫಲಾನುಭವಿಗಳು ಅರ್ಜಿ ಜೊತೆ ಲಗತ್ತಿಸಿಬೇಕಾದ ದಾಖಲಾತಿಗಳು:</u>**

- ನಿಗದಿತ ನಮೂನೆಯಲ್ಲಿ ಭಾವಚಿತ್ರದೊಂದಿಗೆ ಅರ್ಜಿ.
- ಸಂಘದ ಇತ್ತೀಚಿನ ಮೂರು ವರ್ಷಗಳ ಲೆಕ್ಕ ಪರಿಶೋಧನ ಆಗಿರಬೇಕು ಹಾಗೂ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಸಹಕಾರ ಇಲಾಖೆ ದೃಢೀಕರಣ ಹೊಂದಿರಬೇಕು.
- ನೋಂದಾಯಿತ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘದಲ್ಲಿ ಸದಸ್ಯರಾಗಿರುವ ಬಗ್ಗೆ ಸಂಬಂಧಿಸಿದ ಸಂಘದ ಕಾರ್ಯದರ್ಶಿ ರವರಿಂದ ಪಡೆದ ಸದಸ್ಯತ್ವದ ದೃಢೀಕರಣ ಪತ್ರದ ಪ್ರತಿ.
- ಪರಿಶಿಷ್ಟಜಾತಿ/ಪರಿಶಿಷ್ಟಪಂಗಡಕ್ಕೆ ಸೇರಿದ್ದಲ್ಲಿ ಜಾತಿ ಪ್ರಮಾಣ ಪತ್ರದ ದೃಢೀಕೃತ ಪ್ರತಿ.
- ವಿಶೇಷ ಚೇತನರಾಗಿದ್ದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಕ್ಷಮ ಪ್ರಾಧಿಕಾರವು ನೀಡಿರುವ ದೃಢೀಕರಣ ಪ್ರಮಾಣ ಪತ್ರ.